DECEMBER 27, 2025

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

**<><><>**

ಗ್ರಾಮೀಣ ಕೂಲಿ ಕಾರ್ಮಿಕರ ಹಾಜರಾತಿಯ, ಬಯೋಮೆಟ್ರಿಕ್ ದೃಢೀಕರಣ, ಮೊಬೈಲ್ ಆಧಾರಿತ ಮೇಲ್ವಿಚಾರಣೆ, ಸಶಕ್ತ ಸಾಮಾಜಿಕ ಲೆಕ್ಕ ಪರಿಶೋಧನಾ ಕಾರ್ಯ ವಿಧಾನದೊಂದಿಗೆ, ನೂತನ ಕಾಯ್ದೆ, ವಿಕಸಿತ ಭಾರತ 2047; 'ಜಿ ರಾಮ ಜಿ'ಯನ್ನು, ಕೇಂದ್ರ ಸರ್ಕಾರ ಅನುಷ್ಠಾನಗೊಳಿಸಿದೆ. ಮಹಾತ್ಮ ಗಾಂಧಿ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು, ಕೇಂದ್ರ ಸರ್ಕಾರ, ವಿಕಸಿತ ಭಾರತ 2047; ಗ್ರಾಮೀಣ ರೋಜ್‌ಗಾರ್ ಮತ್ತು ಆಜೀವಿಕಾ ಮಿ ’ನ್, ವಿ.ಬಿ; ಜಿ ರಾಮ ಜಿ, ಎಂದು ಮರು ನಾಮಕರಣ ಮಾಡಿದೆ.

<><><>

ವಿಕಸಿತ ಭಾರತ, ಜಿ–ರಾಮ್–ಜಿ ಯೋಜನೆ ಕುರಿತು, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ, ವಿಜಯಪುರ ಜಿಲ್ಲೆ, ನಿಡಗುಂದಿ ತಾಲೂಕು, ಚಿಮ್ಮಲಗಿ ಗ್ರಾಮದ ಫಲಾನುಭವಿ, ಬೋರಮ್ಮ ಬಸವರಾಜ ವಾಲೀಕಾರ.

<><><>

ಬೋರಮ್ಮ ಬಸವರಾಜ ವಾಲೀಕಾರ ಧ್ವನಿ 35 ಸೆಕೆಂದುಗಳು

<><><>

ಕರ್ನಾಟಕ ಭೂ ಕಂದಾಯ ಕಾಯ್ದೆ ತಿದ್ದುಪಡಿಯಿಂದ, ಕೃಷಿಕರು, ಸಹಕಾರ ಸಂಘದಲ್ಲಿ ಅಥವಾ ಬ್ಯಾಂಕುಗಳಲ್ಲಿ, ಸಾಲ–ಸೌಲಭ್ಯ ಪಡೆಯಲು, ಬೆಳೆ ವಿಮೆ, ಬೆಳೆ ಹಾನಿ ಮತ್ತಿತರ ಸೌಲಭ್ಯ ಪಡೆಯಲು, ತೋಟದ ಮಾಲಿಕರಿಗೆ ಆರ್.ಟಿ.ಸಿ ಮಾಡಿಕೊಳ್ಳಲು, ಅನುಕೂಲವಾಗಲಿದೆ ಎಂದು, ಮಡಿಕೇರಿ ಶಾಸಕ, ಮಂಥರಗೌಡ ತಿಳಿಸಿದ್ದಾರೆ.

<><><>

'ಮಧ್ಯಸ್ಥಿಕೆ ರಾಷ್ಟ್ರಕ್ಕಾಗಿ', ಧ್ಯೇಯದೊಂದಿಗೆ, ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, 90 ದಿನಗಳ, ಎರಡನೇ ಆವೃತ್ತಿಯ ಲೋಕ ಅದಾಲತ್ ಅಭಿಯಾನವನ್ನು, 2026ರ ಜನೆವರಿ 2 ರಿಂದ ಆರಂಭಿಸಿ, 90 ದಿನಗಳ ವರೆಗೆ, ರಾಜ್ಯಾದ್ಯಂತ ಆಯೋಜಿಸಲಿದೆ. ರಾಜಿ ಸಂಧಾನಕ್ಕೆ ಯೋಗ್ಯವಾದ, ಅಪರಾಧಿಕ ಹಾಗೂ ಸಿವಿಲ್ ಪ್ರಕರಣಗಳನ್ನು, ಈ ಅಭಿಯಾನದಲ್ಲಿ, ಇತ್ಯರ್ಥ ಪಡಿಸಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗೆ, ಜಾಲತಾಣ www.kslsa.kar.nic.in ಅಥವಾ ನಾಲ್ಸಾ ಸಹಾಯವಾಣಿ ಸಂಖ್ಯೆ 1–5–1–0–0 ಗೆ ಕರೆ ಮಾಡಬಹುದು ಎಂದು, ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ, ಎಚ್.ಶಶಿಧರ ಶೆಟ್ಟಿ ತಿಳಿಸಿದ್ದಾರೆ.

<><><>

'ನಮ್ಮ ನಡೆ, ಅಂತರಂಗದೆಡೆಗೆ' ಎಂಬ, *ವಾಕ್ ವಿಥಿನ್ 2025,* ವಿಶಿಷ್ಟ ಪಾದಯಾತ್ರೆಗೆ, ಪದ್ಮಶ್ರೀ ಪುರಸ್ಕೃತ, ವಿಜಯಲಕ್ಷ್ಮೀ ದೇಶಮಾನೆ, ಧಾರವಾಡ ಕೃಷಿ ವಿಶ್ವವಿದ್ಯಾಲಯದ, ಉಪ ಕುಲಪತಿ ಪಿ.ಎಲ್. ಪಾಟೀಲ, ಧಾರವಾಡದ ಮನೋ ಆರೋಗ್ಯ ಹಾಗೂ ನರ ವಿಜ್ಞಾನಗಳ ಸಂಸ್ಥೆ – ಡಿಮ್ಹಾನ್ಸ್ ಸಭಾಂಗಣದಲ್ಲಿ, ಇಂದು ಬೆಳಗ್ಗೆ, ಚಾಲನೆ ನೀಡಿದರು ಕರ್ಮಚಾರಿಗಳಿಂದ ಕರ್ಮಯೋಗಿಗಳಾಗಿ, ಎಂಬ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ದೂರದೃಷ್ಟಿಯ, ಕಾರ್ಯಾಂಗದ ಚುಕ್ಕಾಣಿ ಹಿಡಿದ, ಅಧಿಕಾರಿಗಳನ್ನು ರೂಪಿಸುವ, ಮಿಷನ್ ಕರ್ಮಯೋಗಿ ಅಭಿಯಾನದ ಭಾಗವಾದ, ಸಾಮರ್ಥ್ಯ ಅಭಿವೃದ್ಧಿ ಆಯೋಗ, 'ಸಕ್ಷಮ'ದ, ತಜ್ಞ ಸದಸ್ಯ, ಆರ್. ಬಾಲಸುಬ್ರಹ್ಮಣ್ಯಂ, ವಾಕ್ ವಿಥಿನ್, ನೇತೃತ್ವ ವಹಿಸಿದ್ದಾರೆ.

<><><>

ವರದಾ ಹಾಗೂ ಬೇಡ್ತಿ ನದಿ ಜೋಡಣೆಯಿಂದ, 18 ದಶಾಂಶ 5–0 ಟಿ.ಎಂ.ಸಿ. ಅಡಿ ನೀರು, ದೊರೆಯಲಿದೆ. ಈ ನದಿಗಳ ಜೋಡಣೆಗೆ, ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲು, ರಾಜ್ಯ ಸರ್ಕಾರ ಅನುಮತಿಸಿದೆ ಎಂದು, ಹಾನಗಲ್ ಶಾಸಕ ಶ್ರೀನಿವಾಸ ಮಾನೆ ತಿಳಿಸಿದ್ದಾರೆ. ಹಾವೇರಿಯಲ್ಲಿ ಮಾತನಾಡಿದ ಅವರು, ಕೇಂದ್ರ ಜಲಶಕ್ತಿ ಖಾತೆ ಸಚಿವ ಸಿ.ಆರ್.ಪಾಟೀಲ ಹಾಗೂ ರಾಜ್ಯ ಜಲಸಂಪನ್ಮೂಲ ಖಾತೆ ಸಚಿವ, ಡಿ.ಕೆ.ಶಿವಕುಮಾರ ಉಪಸ್ಥಿತಿಯಲ್ಲಿ, ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯ, ನದಿ ಜೋಡಣೆ ವಿಶೇ ಸಮಿತಿ ಸಭೆ ನಡೆಯಿತು ಎಂದರು.

<><><>

ವಿಜಯನಗರ ಜಿಲ್ಲೆ, ಹೊಸಪೇಟೆಯ, ತುಂಗಭದ್ರಾ ಜಲಾಶಯಕ್ಕೆ ಅಳವಡಿಸಲು, ಗುಜರಾತ್ ಮೂಲದ ಕಂಪೆನಿ, ಈಗಾಗಲೇ ಎಲ್ಲ ಕ್ರಸ್ಟ್ ಗೇಟ್‌ಗಳ ನಿರ್ಮಾಣ ಪೂರ್ಣಗೊಳಿಸಿದ್ದು, 18ನೇ ಕ್ರಸ್ಟ್‌ಗೇಟ್ ಅಳವಡಿಕೆ ಪ್ರಗತಿಯಲ್ಲಿದೆ ಎಂದು, ತುಂಗಭದ್ರಾ ಜಲಾಶಯ ಮಂಡಳಿ, ಕಾರ್ಯನಿರ್ವಾಹಕ ಅಭಿಯಂತರ, ಚಂದ್ರಶೇಖರ ತಿಳಿಸಿದ್ದಾರೆ.

<><><>

ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ವ್ಯಾಪ್ತಿಯ, ಅಂತರ್ ಕೃಷಿ ಮಹಾವಿದ್ಯಾಲಯಗಳ, 16ನೇ ಯುವಜನೋತ್ಸವ, 'ಕಲಾ ಸಂಗಮ' ಕ್ಕೆ, ಕಲಬುರಗಿ ಕೃಷಿ ಮಹಾವಿದ್ಯಾಲಯದ ಸಭಾಂಗಣದಲ್ಲಿ, ರಾಜ್ಯ ಪ್ರಶಸ್ತಿ ಪುರಸ್ಕೃತ, ಹಿರಿಯ ಕಲಾವಿದ ವೈಜನಾಥ ಬಿರಾದಾರ, ಚಾಲನೆ ನೀಡಿದರು.

<><><>

'ವಿಕಸಿತ ಭಾರತಕ್ಕಾಗಿ ಮಾನವ ಬಂಡವಾಳ' ಧ್ಯೇಯದೊಂದಿಗೆ, ರಾಜ್ಯ ಮುಖ್ಯ ಕಾರ್ಯದರ್ಶಿಗಳ, ಮೂರು ದಿನಗಳ, ಐದನೇ ರಾಷ್ಟ್ರೀಯ ಸಮ್ಮೇಳನ, ಹೊಸ ದಿಲ್ಲಿಯಲ್ಲಿ, ಆರಂಭಗೊಂಡಿದೆ. ರಾಜ್ಯ ಮುಖ್ಯ ಕಾರ್ಯದರ್ಶಿಗಳ ಮೊದಲ ಸಮ್ಮೇಳನ, 2022ರ ಜೂನ್‌ನಲ್ಲಿ ಧರ್ಮ ಶಾಲಾದಲ್ಲಿ ನಡೆದಿತ್ತು.

<><><>

ರಾ ಟ್ರಪತಿ ದ್ರೌಪದಿ ಮುರ್ಮು, ಉತ್ತರಕನ್ನಡ ಜಿಲ್ಲೆ, ಕಾರವಾರದ, ಸೀ ಬರ್ಡ್ ನೌಕಾ ನೆಲೆಗೆ, ನಾಳೆ ಭೇಟಿ ನೀಡಲಿದ್ದಾರೆ. ಭಾನುವಾರ ಬೆಳಗ್ಗೆಯಿಂದ, ಮಧ್ಯಾಹ್ನ 3.30ರ ವರೆಗೆ, ಹಾರವಾಡದಿಂದ, ಮಾಜಾಳಿ ವರೆಗಿನ, ಸಮುದ್ರ ತೀರದಲ್ಲಿ, ಮೀನುಗಾರಿಕೆ ನಿರ್ಬಂಧಿಸಿದ್ದಾಗಿ, ಮೀನುಗಾರಿಕೆ ಇಲಾಖೆ, ಜಂಟಿ ನಿರ್ದೇಶಕರು, ತಿಳಿಸಿದ್ದಾರೆ.

<><><>

ಚಿತ್ರದುರ್ಗ ಜಿಲ್ಲೆ, ಹಿರಿಯೂರು ಸಮೀಪ ಖಾಸಗಿ ಬಸ್ ಮತ್ತು ಕಂಟೇನರ್ ಅಪಘಾತದಲ್ಲಿ ಮೃತಪಟ್ಟ, ಉತ್ತರಕನ್ನಡ ಜಿಲ್ಲೆ, ಭಟ್ಕಳದ ರಶ್ಮಿ ಮಹಾಲೆ ಅವರ ನಿವಾಸಕ್ಕೆ, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಭೇಟಿ ನೀಡಿ, ಸಾಂತ್ವನ ಹೇಳಿದರು.

<><><>

ಇದೇ ಅಪಘಾತದಲ್ಲಿ, ಗಂಭೀರವಾಗಿ ಗಾಯಗೊಂಡು, ಹುಬ್ಬಳ್ಳಿಯ ಕೆ.ಎಂ.ಸಿ.ಆರ್.ಐ ಆಸ್ಪತ್ರೆಗೆ ದಾಖಲಿಸಲಾಗಿದ್ದ, ಖಾಸಗಿ ಬಸ್ ಚಾಲಕ, ಹಾವೇರಿಯ, ಮೊಹಮ್ಮದ್ ರಫೀಕ್ ಹುಲಗೂರ, ಚಿಕಿತ್ಸೆ ಫಲಿಸದೇ ಮೃತಪಟ್ಟಿದ್ದಾರೆ. ದುರ್ಘಟನೆಯಲ್ಲಿ ಮೃತಪಟ್ಟವರ ಸಂಖ್ಯೆ, ಏಳಕ್ಕೆ ಏರಿಕೆಯಾಗಿದೆ.

<><><>

ಮೈಸೂರು, ಅಂಬಾ ವಿಲಾಸ ಅರಮನೆಯ ಜಯ ಮಾರ್ತಾಂಡ ದ್ವಾರದ ಬಳಿ ಬಲೂನ್ ಗೆ ಹೀಲಿಯಂ ಗ್ಯಾಸ್ ತುಂಬುವ ಸಿಲಿಂಡರ್ ಸ್ಫೋಟದಿಂದ ಗಾಯಗೊಂಡಿದ್ದ, ನಂಜನಗೂಡು ಚಾಮಲಾಪುರ ಬೀದಿಯ ನಿವಾಸಿ, ಮಂಜುಳಾ, ಬೆಂಗಳೂರು ಬ್ಯಾಡರಹಳ್ಳಿಯ ಲಕ್ಷ್ಮೀ ಮೃತಪಟ್ಟಿದ್ದು, ಸಾವಿನ ಸಂಖ್ಯೆ ಮೂರಕ್ಕೆ ಏರಿಕೆಯಾಗಿದೆ.

<><><>

ಹೊಸ ವರ್ಷ 2026ರ ಆಗಮನದ ಹಿನ್ನೆಲೆ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಹೋಂ ಸ್ಟೇ, ರೆಸಾರ್ಟ್, ಹೋಟೆಲ್ ಸೇರಿದಂತೆ, ಸಾರ್ವಜನಿಕ ಸ್ಥಳಗಳಲ್ಲಿ ಸಂಭ್ರಮಾಚರಣೆಗೆ, ನಿಯಮ ರೂಪಿಸಲಾಗಿದ್ದು, ಪಾಲನೆ ಕಡ್ಡಾಯ ಎಂದು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ವಿಕ್ರಂ ಅಮಾಟೆ, ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

<><><>

ಆಕಾಶವಾಣಿಯ, ಬಹುಶ್ರುತ, 'ಮನ್ ಕಿ ಬಾತ್' ಕಾರ್ಯಕ್ರಮ, ನಾಳೆ 28ರಂದು, ಭಾನುವಾರ ಬೆಳಗ್ಗೆ 11 ಗಂಟೆಗೆ ಪ್ರಸಾರವಾಗಲಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ, 129ನೇ ಆವೃತ್ತಿಯ ಮನದ ಮಾತನ್ನು, ಎಲ್ಲ ಆಕಾಶವಾಣಿ ಕೇಂದ್ರಗಳು, ದೂರದರ್ಶನ ವಾಹಿನಿ ಹಾಗೂ ಪಿ.ಎಂ.ಓ ಕಚೇರಿಯ ಯೂಟ್ಯೂಬ್ ವಾಹಿನಿ ಬಿತ್ತರಿಸಲಿವೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.